# ಕುಲಕ್ಕೆ ತಿಲಕ ನಮ್ಮ ಮಾದರ ಚೆನ್ನಯ್ಯ

**ಗಿರಿಯಪ್ಪ ಎನ್. ಜಿ.**

ಸಂಶೋಧನಾ ವಿದ್ಯಾರ್ಥಿ, ಡಾ.ಆರ್.ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**Received: 26-05-2024 ; Acepted: 03-06-2024 ; Published: 09-07-2024**

**DOI: https://doi.org/10.5281/zenodo.12672850**

**ABSTRACT:**

ಮಾದರ ಚೆನ್ನಯ್ಯ 12ನೇ ಶತಮಾನಕ್ಕಿಂತಲೂ ಹಿಂದೆ ಜೀವಿಸಿದ್ದವನು. ಮಾದರ ಚೆನ್ನಯ್ಯನು ಹಲವಾರು ವಚನಗಳನ್ನು ರಚಿಸಿದ್ದಿರಬಹುದು ಆದರೆ ಚೆನ್ನಯ್ಯನು ಬರೆದ ವಚನಗಳಲ್ಲಿ ಸದ್ಯಕ್ಕೆ 10 ವಚನಗಳು ದೊರೆತಿರುತ್ತವೆ. "ಕೈಯುಳಿ ಕತ್ತಿ ಅಡಿಗೂಟಕ್ಕಡಿಯಾಗಬೇಡ" ಎಂಬುದು ಚೆನ್ನಯ್ಯನ ವಚನಗಳ ಅಂಕಿತವಾಗಿದೆ. ಚೆನ್ನಯ್ಯನು ಚೋಳ ರಾಜನ ಆಸ್ಥಾನದಲ್ಲಿ ಲಾಯದ ಕುದುರೆಗಳಿಗೆ ಹುಲ್ಲು ತರುವ ಕೆಲಸ ಮಾಡುತ್ತಿದ್ದನು. ಚೆನ್ನಯ್ಯ ಗುಪ್ತ ಶಿವಭಕ್ತನಾಗಿದ್ದನು. ಅದೇ ರೀತಿ ಚೋಳರಾಜನು ಮಹಾಶಿವ ಭಕ್ತನಾಗಿದ್ದನು. ಪ್ರತಿದಿನ ಚೋಳ ರಾಜನ ಮನೆಯಲ್ಲಿ ದಿವ್ಯವಾದ ಅನ್ನವನ್ನು ಶಿವನುಂಡು ತೃಪ್ತ ನಾಗುವವರೆಗೂ ಕಾದಿರುತ್ತಿದ್ದನು. ಒಮ್ಮೆ ಚೋಳನ ಮನೆಗೆ ಶಿವನು ಊಟ ಸವಿಯಲು ಬಂದಿರುವುದಿಲ್ಲ. ಅಂದು ಶಿವನು ಚೆನ್ನಯ್ಯನ ಮನೆಯಲ್ಲಿ ಅಂಬಲಿ ರುಚಿಸವಿದು ಸಂತೃಪ್ತನಾಗಿರುತ್ತಾನೆ. ಚೋಳ ರಾಜನ ಮನೆಗೆ ಶಿವನು ಬರದ ಕಾರಣ ತನ್ನ ಭಕ್ತಿಯಲ್ಲಿ ಲೋಪವಾಗಿದೆ ಎಂದುಕೊಂಡು ತನ್ನ ಕತ್ತಿಯಿಂದ ತಲೆ ಕತ್ತರಿಸಿಕೊಳ್ಳಲು ಮುಂದಾಗುವನು. ಆಗ ಶಿವನು ಪ್ರತ್ಯಕ್ಷನಾಗಿ ನಡೆದ ವಿಚಾರಗಳನ್ನು ತಿಳಿಸುವನು. ಚೋಳರಾಜ ಆಗ ನನಗಿಂತಲೂ ಅಪ್ರತಿಮ ಶಿವಭಕ್ತನಿದ್ದಾನೆಂದು ತಿಳಿದುಕೊಂಡು ಶಿವನನ್ನು ಅಂಬಲಿಗೆ ಒಲಿಸಿದ ಶಿವ ಭಕ್ತನಾದ ಚೆನ್ನಯ್ಯನ ಮನೆ ಬಾಗಿಲಿಗೆ ಬರುತ್ತಾನೆ. ಚೋಳ ರಾಜ ಚೆನ್ನಯ್ಯನನ್ನು ಕಂಡು ಆತನ ಕಾಲಿಡಿದು ನಿಮ್ಮ ಕೆರ ನನ್ನ ಶಿರಕ್ಕೆ ಸಮಾನವೆಂದು ನುಡಿದು ಶಿವನೊಲಿಸಿದ ನಿನ್ನ ಕುಲ ಸತ್ಕುಲ ವೆಂದು ನುಡಿಯುತ್ತಾನೆ. ಚೆನ್ನಯ್ಯನ ಗುಪ್ತ ಭಕ್ತಿಯನ್ನು ಚೋಳ ರಾಜನು ಇಡೀ ಜಗತ್ತಿಗೆ ಪರಿಚಯಿಸುತ್ತಾನೆ. ಬಸವಣ್ಣನವರು ತಮ್ಮ ಅನೇಕ ವಚನಗಳಲ್ಲಿ ಮಾದರ ಚೆನ್ನಯ್ಯನವರನ್ನು ಉಲ್ಲೇಖಿಸಿದ್ದಾರೆ. "ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ", "ಅಪ್ಪನು ನಮ್ಮ ಮಾದಾರ ಚೆನ್ನಯ್ಯ", "ಚೆನ್ನಯ್ಯನ ಮನೆಯ ದಾಸನ ಮಗನು" ಎಂದು ಚೆನ್ನಯ್ಯನವರನ್ನು ಉಲ್ಲೇಖಿಸಿದ್ದಾರೆ. ಆ ಮೂಲಕ 12ನೇ ಶತಮಾನಕ್ಕಿಂತಲೂ ಹಿಂದೆಯೇ ಚೆನ್ನಯ್ಯನವರು ಜೀವಿಸಿದ್ದರು ಎಂದು ತಿಳಿಯುತ್ತದೆ. ಅಲ್ಲದೆ ಚೆನ್ನಯ್ಯನವರು ಬಸವಣ್ಣನವರಿಗಿಂತಲೂ ಹಿರಿಯ ವಚನಕಾರರು ಎಂದು ಈ ಲೇಖನದಲ್ಲಿ ಅರಿತುಕೊಳ್ಳಬಹುದಾಗಿದೆ.

**KEYWORDS:**

ಮಾದರ ಚೆನ್ನಯ್ಯ, ಚೋಳ ರಾಜ, ಶಿವ, ಬಸವಣ್ಣ , ಭಕ್ತಿ.

ಮಾದಾರ ಚೆನ್ನಯ್ಯನು 12ನೇ ಶತಮಾನಕ್ಕಿಂತ ಮೊದಲು ಜೀವಿಸಿದ್ದನು. ಇವನು ಮಹಾ ಶಿವಭಕ್ತನಾಗಿದ್ದನು. ಕ್ರಿ.ಶ. 1050 ರಲ್ಲಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ ಜನಿಸಿದನು. ತಾಯಿ ಶಿವಗಂಗಮ್ಮ , ಪತ್ನಿ ಗಂಗವ್ವ , ಉದುಕವ್ವ. ಇವರಿಗೆ ತಿಮ್ಮರಾಜ ಮತ್ತು ಕೆಂಪರಾಜ ಎಂಬ ಇಬ್ಬರು ಮಕ್ಕಳಿದ್ದರೆಂದು ತಿಳಿದು ಬರುತ್ತದೆ. ಇವರ ನಿತ್ಯದ ಕಾಯಕ ಚಮ್ಮಾರಿಕೆಯಾಗಿತ್ತು. ಹಾಗೆ 'ಕೈಯುಳಿ ಕತ್ತಿ ಅಡಿಗೂಟಕ್ಕಡಿಯಾಗಬೇಡ' ಎಂಬ ಅಂಕಿತನಾಮವನ್ನು ತಮ್ಮ ವಚನಗಳಿಗೆ ಇಟ್ಟಿದ್ದಾರೆ. ಇವರ 10 ವಚನಗಳು ಮಾತ್ರವೇ ದೊರೆತಿದ್ದು , ಉಳಿದವು ಕಲ್ಯಾಣ ಕ್ರಾಂತಿಯಲ್ಲಿ ನಾಶವಾಗಿದ್ದಿರಬಹುದು. ಮಾದಾರ ಚೆನ್ನಯ್ಯ ಬಸವಣ್ಣನಿಗಿಂತಲೂ ಹಿರಿಯವನಾಗಿದ್ದಾನೆ. ಹಾಗಾಗಿ ಬಸವಣ್ಣ ತನ್ನ ಹಲವಾರು ವಚನಗಳಲ್ಲಿ ಮಾದಾರ ಚೆನ್ನಯ್ಯನ ಬಗ್ಗೆ ವಚನಗಳನ್ನು ರಚಿಸಿದ್ದಾನೆ. ಅದರಂತೆ ಇನ್ನುಳಿದ ಕೆಲವು ವಚನಕಾರರು ಸಹ ಚೆನ್ನಯ್ಯನ ಬಗ್ಗೆ ವಚನಗಳನ್ನು ರಚಿಸಿದ್ದಾರೆ.

ಬಸವಣ್ಣನು 'ಮಾದರ ಚನ್ನಯ್ಯನ ಮನೆಯ ದಾಸನ ಮಗ'ನೆಂದು ಹೇಳಿಕೊಂಡಿದ್ದಾನೆ. 'ಅಪ್ಪನು ನಮ್ಮ ಮಾದರ ಚೆನ್ನಯ್ಯ' ಎಂದು ಹೇಳಿದ್ದಾನೆ. ತಾನು ಚೆನ್ನಯ್ಯನಷ್ಟು ಜ್ಞಾನ ಸಂಪಾದನೆ ಮಾಡಿಲ್ಲವೆಂದು ಹಾಗೂ ಚೆನ್ನಯ್ಯನ ವಚನಗಳು ತನಗೆ ಮಾರ್ಗದರ್ಶನ ನೀಡಿವೆ ಎಂಬ ಆಶಯ ವ್ಯಕ್ತಪಡಿಸಿರಬಹುದು.

ಕ್ರಿ.ಶ. 1070ರಲ್ಲಿ ಮಾದರ ಚನ್ನಯ್ಯನು ಕರ್ನಾಟಕದಿಂದ ತಮಿಳುನಾಡಿಗೆ ಹೋಗಿದ್ದು ಅಲ್ಲಿ ಕರಿಕಾಲ ಚೋಳನ ನಾಡಿನಲ್ಲಿ ಆಶ್ರಯ ಪಡೆದಿದ್ದನು. ಚೋಳ ರಾಜನು ಮಹಾಶಿವ ಭಕ್ತನಾಗಿದ್ದನು. ಇವನ ಭಕ್ತಿ ಭಾವವನ್ನು ನೋಡಿದ್ದ ಚೆನ್ನಯ್ಯನು ಕೂಡ ಶಿವನ ಪರಮ ಭಕ್ತಿಯುಳ್ಳವನಾಗಿದ್ದನು. ಈತನದು ಗುಪ್ತ ಭಕ್ತಿಯಾಗಿತ್ತು. ಹಾಗೆ ಚೋಳನ ಆಸ್ಥಾನದಲ್ಲಿ ಮಾದಾರ ಚೆನ್ನಯ್ಯನ ಕುದುರೆಗಳಿಗೆ ಹುಲ್ಲು ತರುವ ಕಾಯಕವನ್ನು ಪ್ರತಿನಿತ್ಯ ಮಾಡುತ್ತಿದ್ದನು.

"ಗುಪ್ತ ಭಕ್ತನಾದ ಚೆನ್ನಯ್ಯನ ಭಕ್ತಿ ಲೋಕದ ಕಣ್ಣಿಗೆ ಬಿದ್ದಿರಲಿಲ್ಲ. ಚೆನ್ನಯ್ಯನನ್ನು ನೋಡಿದವರಿಗೆ ಆತ ಪರಮ ಭಕ್ತನೆಂಬ ಕಲ್ಪನೆಯು ಬರುವಂತಿರಲಿಲ್ಲ. ಆದರೆ ಈತನು ತನ್ನ ಸರ್ವಸ್ವವನ್ನು ಶಿವಾರ್ಪಣಾ ಮಾಡಿಕೊಂಡಿದ್ದ."[1] ಚೆನ್ನಯ್ಯನು ಕಾಡಿಗೆ ಹುಲ್ಲು ತರಲು ಅಲ್ಲಿ ರುಚಿಯಾದ ಹಣ್ಣುಗಳಿದ್ದರೆ ತಾನು ತಿನ್ನುವುದಕ್ಕಿಂತ ಮೊದಲೇ ಇವೆಲ್ಲವೂ ಶಿವನಿಗೆ ಅರ್ಪಿತವಾಗಲಿ ಎಂದು ಹೇಳಿ ಸೇವಿಸುತ್ತಿದ್ದನು.

ಚೆನ್ನಯನ ಗುಪ್ತ ಭಕ್ತಿ ಹೇಗಿತ್ತೆಂದರೆ ಕಾಡಿನಲ್ಲಿ ಹುಲ್ಲು ತರಲು ಹೋಗಿದ್ದಾಗ ಅಲ್ಲೇ ಮರದಡಿಯಲ್ಲಿ ಎಲೆಗಳನ್ನು ಹಾಸಿಗೆಯಾಗಿ ಹಾಸಿ ಅದರ ಮೇಲೆ ಶಿವಲಿಂಗವನ್ನು ಇಟ್ಟು ಲಿಂಗವನ್ನು ದೃಷ್ಟಿಸಿ ನೋಡುತ್ತಾ ತಮಗೆ ತಾವೇ ಲಿಂಗದ ಜೊತೆ ಮಾತನಾಡಿಕೊಳ್ಳುತ್ತಿದ್ದರು. ಕಾಡಿನಲ್ಲಿ ಆಯ್ದು ತಂದಿದ್ದಂತಹ ಮಾವು, ಪೇರಲ, ಬಾಳೆಹಣ್ಣುಗಳನ್ನು ನೈವೇದ್ಯಕ್ಕಿಡುತ್ತಿದ್ದರು. ಆಗ ಇವರು ಮಗುವಿನ ಮನಸ್ಸಿನಂತೆ ಲಿಂಗಕ್ಕೆ ನೀನು ಬೆಳಗ್ಗೆಯಿಂದ ಏನೂ ತಿಂದಿಲ್ಲ. ಈ ಹಣ್ಣನ್ನಾದರೂ ತಿನ್ನು ಎಂದು ಕೇಳಿಕೊಳ್ಳುತ್ತಿದ್ದರು. ಲಿಂಗಯ್ಯ ಉಣ್ಣದಿದ್ದಾಗ ನೀನು ಬೇರೆಯವರ ಮನೆಯಲ್ಲುಂಡು ಈ ಬಡವನ ಆತಿಥ್ಯ ನಿನಗೆ ಬೇಡವಾಗಿದೆ ಎಂದು ನೊಂದುಕೊಳ್ಳುತ್ತಿದ್ದರು.

ಒಂದು ದಿನ ಕುದುರೆಗಳಿಗೆ ತಿನ್ನಲು ಹುಲ್ಲನ್ನು ತಂದು ಹಾಕಿ, ಸಂಜೆ ಮನೆಗೆ ಬಂದರು. ಆಗ ಮನೆಯಲ್ಲಿ ಶಿವನಿಗೆ ಪ್ರಸಾದ ರೂಪದಲ್ಲಿ ಅಂಬಲಿಯನ್ನು ನೈವೇದ್ಯಕ್ಕಿಟ್ಟರು. ನಂತರ ಅಂಬಲಿಯನ್ನು ಕುಡಿಯುವ ಮೊದಲು ಕೈಯಲ್ಲಿಡಿದು ಶಿವನೇ ನಮ್ಮ ಬಡವರ ಮನೆ ಅಂಬಲಿ ಸ್ವೀಕರಿಸು ಎಂದು ತುತ್ತೇತ್ತುವ ಮೊದಲೇ ಶಿವನು ಆಗಲೇ ಒಂದು ಗುಟುಕು ಸವಿದಿದ್ದನು. "ಒಂದು ತುತ್ತಿಗೆ ಕೈಲಾಸವನ್ನೇ ಕೊಟ್ಟೆ. ಎರಡನೇ ಸುರಿಗೆ ಶಿವಪದವಿಯನ್ನಿತ್ತೆ ಇನ್ನು ಮುಂದಿನ ಸುರಿಗಳಿಗೆ ಕೊಡುವುದೇನು ಉಳಿದೆ ಇಲ್ಲವಲ್ಲ ಎಂದು ಅಂಬಲಿಯ ರುಚಿಗೆ ಮರುಳಾದ ಶಿವ ಹಸಿವು ತಣಿದ ಮೇಲೂ ಉಣ್ಣುತ್ತಲೇ ಇದ್ದ ಉಂಡು ಉಂಡು ಸಂತೃಪ್ತನಾದ."[2]

ಇತ್ತ ಚೋಳ ರಾಜೇಂದ್ರನು ಅಪ್ರತಿಮ ಶಿವಭಕ್ತನಾಗಿದ್ದನು. ಇವನ ಮನೆಯಲ್ಲಿ ಪ್ರತಿನಿತ್ಯ ಶಿವನುಂಡು ಹೋಗುತ್ತಿದ್ದನು. ಆದರೆ ಶಿವನು ಚೆನ್ನಯ್ಯನ ಮನೆಯಲ್ಲುಂಡ ದಿನ ಚೋಳನ ಮನೆಯ ದಿವ್ಯಾನ್ನವನ್ನುಣ್ಣಲು ಹೋಗಿರುವುದಿಲ್ಲ. ಆ ಕಾರಣಕ್ಕೆ ಚೋಳರಾಜನಿಗೆ ಇದರಿಂದ ಆತಂಕವಾಗಿ ತನ್ನಿಂದ ಯಾವುದೋ ಅಪಚಾರವಾಗಿರಬಹುದೆಂದು ಬಗೆದು ತನ್ನಲ್ಲಿದ್ದ ಕತ್ತಿಯಿಂದ ತಲೆಯನ್ನು ಕತ್ತರಿಸಿಕೊಳ್ಳಲು ತೊಡಗುವವನು. ಆಗ ಶಿವನು ಅವನನ್ನು ತಡೆದು ನಾನು ಚೆನ್ನಯ್ಯನ ಮನೆಯಲ್ಲಿ ಈ ದಿನ ಊಟ ಮಾಡಿದೆನು. ದಿವ್ಯಾನ್ನಕ್ಕಿಂತಲೂ ಅತಿಯಾದ ರುಚಿ ಅಂಬಲಿಯಲ್ಲಿತ್ತು. ಹಾಗಾಗಿ ಅತಿಯಾಗಿ ಅಂಬಲಿಯನ್ನುಂಡ ಕಾರಣ ನಿನ್ನ ಮನೆಗೆ ಬರಲು ಸಾಧ್ಯವಾಗಲಿಲ್ಲ ಎಂದು ಶಿವನು ನುಡಿಯುತ್ತಾನೆ.

ಆಗ ಶಿವನನ್ನೆ ಮನೆಗೆ ಕರೆಯಿಸಿ ಅಂಬಲಿಯನ್ನು ಬಡಿಸಿದ ಚೆನ್ನಯ್ಯನಾರು ಎಂದು ಊರೆಲ್ಲ ಆತನಿಗಾಗಿ ಚೋಳ ರಾಜನು ಹುಡುಕಿಸುತ್ತಾನೆ. ಚೆನ್ನಯ್ಯನ ಮನೆ ಪತ್ತೆ ಮಾಡಿ ಆತನ ಮನೆಗೆ ಚೋಳರಾಜನ ಪರಿವಾರವೇ ಹೋಗುತ್ತದೆ. ಚೆನ್ನಯ್ಯನನ್ನು ನೋಡಿ ಚೋಳರಾಜನು ಒಡನೆಯೇ ಚೆನ್ನಯ್ಯನ ಪಾದಕ್ಕೆ ಅಡ್ಡ ಬಿದ್ದು ನಿಮ್ಮ ಕೆರೆ ನನ್ನ ಶಿರಕ್ಕೆ ಸಮಾನವೆಂದು ನುಡಿಯುತ್ತಾನೆ. ಆಗ ಚೆನ್ನಯ್ಯನು ತನ್ನದು ಹೀನಕುಲ ನನ್ನಂತ ಕುಲದವನ ಕಾಲು ಹಿಡಿಯುವುದು ತಪ್ಪು ಎಂದು ಹೇಳುತ್ತಾನೆ.

ಆಗ ಚೋಳ ರಾಜನು ದೇವನನ್ನೇ (ಶಿವ) ಒಲಿಸಿದ ನಿನ್ನ ಕುಲ ಸತ್ಕುಲವೆಂದು ಹೇಳುತ್ತಾನೆ. ನಂತರ ಚನ್ನಯ್ಯನನ್ನು ಆನೆಯ ಮೇಲೆ ಕೂರಿಸಿ ಚೋಳ ರಾಜ್ಯಕ್ಕೆ ರಾಜಮರ್ಯಾದೆಯಿಂದ ಕರೆದುಕೊಂಡು ಬರುತ್ತಾನೆ. ಚನ್ನಯ್ಯನಿಗೆ ಈ ರೀತಿಯ ಆತಿಥ್ಯಕ್ಕೆ ಚಡಪಡಿಸಿ ಗುಪ್ತಭಕ್ತಿಯು ಬಯಲಾದುದಕ್ಕಾಗಿ ಬಹಳ ನೋವನ್ನು ಚನ್ನಯ್ಯನು ಅನುಭವಿಸಿದನು. ಆಗ ಈ ಬೇಸರದ ಬಗ್ಗೆ ಶಿವನಿಗೆ ಅರಿವಾಗುತ್ತದೆ. ಶಿವನು ಚನ್ನಯ್ಯನನ್ನು ಸಂತೈಸಿ ನಿನ್ನ ಗುಪ್ತಭಕ್ತಿ ಜಗತ್ತಿಗೆ ಆದರ್ಶವಾಗಲಿ ಇನ್ನೂ ನೀವು ನಮ್ಮಲ್ಲಿಗೆ ಬನ್ನಿ ಎಂದು ಕರೆದೊಯ್ಯುವಾಗ ಚೋಳ ರಾಜನನ್ನು ಕರೆದು ಚನ್ನಯ್ಯ ಬರೆದಿರುವ ಸಾವಿರ ವಚನಗಳನ್ನು ಸಂಗ್ರಹಿಸಿ ಅವುಗಳನ್ನು ಇಡೀ ಜಗತ್ತಿಗೆ ಪರಿಚಯಿಸಬೇಕೆಂದು ಹೇಳಿ ಕೈಲಾಸಕ್ಕೆ ಚನ್ನಯ್ಯನ ಕರೆದೊಯ್ಯುತ್ತಾರೆ.

**ಆಗುಚೇಗೆಯೆಂಬ ದಡಿಗೋಲಿನಲ್ಲಿ**
**ಅಗಡದ ಎಮ್ಮೆಯ ಚರ್ಮವ ತೆಗೆದು.**

**ಉಭಯ ನಾಮವೆಂಬ ನಾರಿಯಲ್ಲಿ**
**ಕಿತ್ತಿಯನೊಪ್ಪವ ಮಾಡಿ**
**ಭಾವವೆಂಬ ಕಿಗುಡಿನಲ್ಲಿ**
**ಸರ್ವಸಾರವೆಂಬ ಖಾರದ ನೀರ ಹೊಯಿದು**
**ಅಟ್ಟೆಯ ದುರ್ಗಣ ಕೆಟ್ಟು ,**
**ಮೆಟ್ಟಡಿಯವರಿಗೆ ಮುಟ್ಟಿಸ ಬಂದೆ.**
**ಮೆಟ್ಟಡಿಯ ತಪ್ಪಲ ಕಾಯದೆ**
**ಮೆಟ್ಟಡಿಯ ಬಟ್ಟೆಯ ನೋಡಿಕೊಳ್ಳಿ.**
**ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ.**
**ಅರಿ ನಿಜಾತ್ಮ ರಾಮ ರಾಮನಾ**[3]

ಈ ಮೇಲಿನ ವಚನದಲ್ಲಿ ಚರ್ಮಗಾರಿಕೆ ವೃತ್ತಿಯನ್ನು ಪರಿಚಯಿಸಿದ್ದಾರೆ. ಚರ್ಮವನ್ನು ಚಪ್ಪಲಿ ಮಾಡವ ಮೊದಲು ಚರ್ಮ ಹದಮಾಡಬೇಕೆಂದು ತಿಳಿಸುತ್ತಾರೆ. ಎಮ್ಮೆ ಚರ್ಮವನ್ನುಸುಲಿದ ಮೇಲೆ ಅದನ್ನು ನೀರಿನಲ್ಲಿ ಕೆಲವು ದಿನಗಳು ನೆನೆಹಾಕಬೇಕು. ಆ ಮೇಲೆ ನೀರಿನಿಂದ ಚರ್ಮತೆಗೆದು ಒಣಗಿಸಿ ಮೆಟ್ಟು ಮಾಡುವುದಕ್ಕೆ ಯೋಗ್ಯವಾಗುವಂತೆ ಮಾಡಿದ ಮೇಲೆ ಆ ಚರ್ಮದಿಂದ ಪಾದರಕ್ಷೆಗಳನ್ನು ಮಾಡಬೇಕು ಎಂದು ಹೇಳುತ್ತಾರೆ. ಹೀಗೆ ಕಾಯಕವನ್ನು ಮಾಡುತ್ತ ಶಿವಶರಣರ ಸೇವೆ ಮಾಡಬೇಕೆಂದುದನ್ನು ಇಲ್ಲಿ ತಿಳಿಸಿದ್ದಾರೆ.

**ಸಾಂಖ್ಯ ಶ್ವಪಚ, ಅಗಸ್ತ್ಯ ಕಬ್ಬಿಲ,**
**ದೂರ್ವಾಸ ಮಚ್ಚಿಗ, ದಧೀಚಿ ಕೀಲಿಗ**
**ಕಶ್ಯಪ ಕಮ್ಮಾರ, ರೋಮಜ ಕಂಚುಗಾರ**
**ಕೌಂಡಿಲ್ಯ ನಾವಿದನೆಂಬುದನರಿದು.**
**ಮತ್ತೆ ಕುಲವುಂಟೆಂದು ಛಲಕ್ಕೆ ಹೊರಲೇತಕ್ಕೆ ?**
**ಇಂತಿ ಸಪ್ತ ಋಷಿಗಳೆಲ್ಲರೂ**
**ಸತ್ಯದಿಂದ ಮುಕ್ತರಾದುದನರಿಯದೆ.**
**ಅಸತ್ಯದಲ್ಲಿ ನಡೆದು, ವಿಪ್ರರ ನಾವು ಘನವೆಂದು**
**ಹೋರುವ ಹೊತ್ತು ಹೋಕರ ಮಾತೇತಕ್ಕೆ ?**
**ಕೈಯುಳಿ ಕತ್ತಿ ಅಡಿಗೂಂಟಕ್ಕಡಿಯಾಗಬೇಡ.**
**ಅರಿ ನಿಜಾತ್ಮರಾಮ ರಾಮನಾ"**[4]

ಈ ವಚನದಲ್ಲಿ ಹೀನ ಕುಲದವರೆಂದು ಯಾರನ್ನು ನಾವು ಹೀಯಾಳಿಸುವಂತಹ ಕೆಲಸ ಮಾಡಬಾರದೆಂದು ತಿಳಿಸಿದ್ದಾರೆ. ಅಸತ್ಯ ಮಾರ್ಗದಲ್ಲಿ ನಡೆಯಬಾರದು. ಹಾಗೆ ಕುಲಗಳು ಎಂಬುವುದು ಈ ಸಮಾಜದಲ್ಲಿಲ್ಲ. ನೀಚ ಮತ್ತು ಶ್ರೇಷ್ಠ ಎಂಬ ಎರಡೇ ಕುಲಗಳಿರುವುದು. ನಾವು ಬ್ರಾಹ್ಮಣ ಕುಲವೆಂದು ಹೇಳಿಕೊಂಡು ಸುಮ್ಮನೆ ಕಾಲ ಕಳೆಯುವಂತಹ ಮಾತುಗಳನ್ನಾಡುತ್ತಾ ಸಮಯ ಕಳೆಯುವುದರಲ್ಲಿ ಯಾವ ಪ್ರಯೋಜನವಾಗುವುದಿಲ್ಲ ಎಂದಿದ್ದಾರೆ.

**ನಡೆ ನುಡಿ ಸಿದ್ಧಾಂತವಾದಲ್ಲಿ, ಕುಲ ಹೊಲೆ ಸೂತಕವಿಲ್ಲ.**
**ನುಡಿ ಲೇಸು, ನಡೆಯದಧಮವಾದಲ್ಲಿ.**
**ಅದು ಬಿಡುಗಡೆಯಿಲ್ಲದ ಹೊಲೆ.**
**ಕಳವು ಪಾರದ್ವಾರಂಗಳಲ್ಲಿ ಹೊಲಬರನರಿಯದೆ.**

**ಕೆಟ್ಟು ನಡೆವುತ್ತ. ಮತ್ತೆ ಕುಲಜರೆಂಬ ಒಡಲವರುಂಟೆ?**
**ಆಚಾರವೇ ಕುಲ, ಅನಾಚಾರವೇ ಹೊಲೆ.**
**ಇಂತೀ ಉಭಯವ ತಿಳಿದರಿಯಬೇಕು.**
**ಕೈಯುಳಿ ಕತ್ತಿ ಅಡಿಗುಂಟಾಕ್ಕಡಿಯಾಗಬೇಡ.**
**ಅರಿ ನಿಜಾತ್ಮರಾಮ ರಾಮನಾ**[5]

ಈ ವಚನದಲ್ಲಿ ಸಮಕಾಲಿನ ಸಮಾಜವನ್ನು ಎಚ್ಚರಿಸುವ ಪ್ರಯತ್ನ ಮಾಡಿದ್ದಾರೆ. ನಮ್ಮ ನಡೆ ಮತ್ತು ನುಡಿ ಕೆಟ್ಟದಾಗಿರಬಾರದು. ನಡೆ-ನುಡಿ ಶುದ್ಧವಾಗಿರಬೇಕೆಂದಿದ್ದಾರೆ. ನಮ್ಮ ಆಚಾರ ವಿಚಾರಗಳು ಒಳ್ಳೆಯವಾಗಿರಬೇಕು. ಯಾರು ಅನಾಚಾರಗಳನ್ನು ಮಾಡುವರೊ ಅವರೇ ಕೀಳು ಕುಲದವರಾಗಿರುತ್ತಾರೆ ಎಂದು ಹೇಳಲಾಗಿದೆ.

**ಕಾಯದ ಸುಳ್ಳು ಹುಳ್ಳನ್ನಕ್ಕ ಕರ್ಮ ಪೂಜೆಬೇಕೆಂಬರ**
**ಜೀವನ ಸಂಚಾರವುಳ್ಳನ್ನಕ್ಕ ಜ್ಞಾನವರಿಯಬೇಕೆಂಬುರ**
**ಜ್ಞಾನ ಧ್ಯಾನಿಸಿ ಕಾಂಬಲ್ಲಿ**
**ಕಾಯದ ಕರ್ಮದಿಂದ ಮುಕ್ತಿಯೋ?**
**ಜೀವದ ಜ್ಞಾನದಿಂದ ಮುಕ್ತಿಯೋ?**
**ಧ್ಯಾನಿಸಿ ಕಾಲ ಕುರುಹ ಎನಗೊಂದು ಬಾರಿ ತೋರಾ.**
**ಕೈಯುಳಿ ಕತ್ತಿ ಅದಿಗುಂಟಾಕ್ಕಡಿಯಾಗಬೇಡ**
**ಹರಿ ನಿಜಾತ್ಮರಾಮ ರಾಮನಾ**[6]

ಈ ವಚನದಲ್ಲಿ ಹೀಗೆ ಹೇಳುತ್ತಾರೆ. ನಾವು ಮಾಡುವ ಕಾಯಕದಿಂದ ಮುಕ್ತಿಯನ್ನು ಪಡೆಯುತ್ತೇವೆ. ಜ್ಞಾನದಿಂದ ಮುಕ್ತಿ ಸಿಗುವುದು ನೋಡಿಲ್ಲ. ಧ್ಯಾನ ಮಾಡುವುದರಿಂದಲೂ ಮುಕ್ತಿ ಸಿಗುವುದು ನೋಡಿಲ್ಲ. ಧ್ಯಾನ ಮಾಡುವುದರಿಂದಲೂ ಮುಕ್ತಿಯನ್ನು ಪಡೆದಿರುವ ಮನುಷ್ಯರು ಕಡಿಮೆ. ಆದರೆ ಯಾರು ದಿನನಿತ್ಯ ದುಡಿಯುತ್ತಾರೆಯೋ ಅವರು ಆ ಮೂಲಕ ಮುಕ್ತಿಯನ್ನು ಕಾಣಬಹುದೆಂದು ತಿಳಿಸಲಾಗಿದೆ.

ಬಸವಣ್ಣನ ಅನೇಕ ವಚನಗಳಲ್ಲಿ ಮಾದರ ಚೆನ್ನಯ್ಯನ ಉಲ್ಲೇಖಗಳನ್ನು ಗಮನಿಸಿದರೆ ಚೆನ್ನಯ್ಯನು ಸಾವಿರಾರು ವಚನಗಳ ರಚಿಸಿ ಆ ಮೂಲಕ ಬಸವಣ್ಣನಿಗೆ ಪ್ರೇರಣೆ ನೀಡಿರಬಹುದೆಂಬುದನ್ನು ಅರಿಯಬಹುದು. ಮಾದಾರ ಚೆನ್ನಯ್ಯನ ಬಗ್ಗೆ ಉಲ್ಲೇಖಿಸಿರುವ ಬಸವಣ್ಣನ ವಚನಗಳ ಆಯ್ದ ಸಾಲುಗಳನ್ನು ಈ ಕೆಳಕಂಡಂತೆ ನೋಡಬಹುದು.

1. ಓದಿದ ಫಲವು ಮಾದಾರ ಚೆನ್ನಯ್ಯಂಗಾಯಿತ್ತು
2. ಮುತ್ತಯ್ಯ ಚೆನ್ನಯ್ಯನಾದರೆ ಆನು ಬದುಕೆನೆ?
3. ಕಕ್ಕಯ್ಯ ಹಿರಿಯಯ್ಯ. ಚಿಕ್ಕಯ್ಯ ಚೆನ್ನಯ್ಯ
4. ಉಣ್ಣನೆ ಚೆನ್ನಯ್ಯನ ಸಂಗಾತ.?
5. ಮಾದಾರ ಚೆನ್ನಯ್ಯಂಗೆ, ಡೋಹಾರ ಕಕ್ಕಯ್ಯಂಗೆ.
6. ಮಾದಾರ ಚೆನ್ನಯ್ಯನ ಮನೆಯಲುಂಡ

7. ದೇವಾ ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು.

8. ಚೆನ್ನನೆತ್ತ. ಜೋಳನೆತ್ತ?
ಚೆನ್ನ ನೋಡ ನುಂಡ ಶಿವ ಆಹಾ! ಅಯ್ಯಾ!
ಚೆನ್ನ, ಚೋಳನ ಮನೆಯ ಕಂಪಣಿಗನಯ್ಯಾ!

9. ಚೆನ್ನ ನೋಡನುಂಡ ಶಿವ ಆಹಾ! ಅಯ್ಯಾ!

10. ಚೆನ್ನ. ಚೋಳನ ಮನೆಯ ಕಂಪಣಿಗನಯ್ಯಾ!

11. ಮಾದರ ಚೆನ್ನಯ್ಯನ ಮನೆಯ ಮಗ ನಾನಯ್ಯ

12. ಕುಲಕ್ಕೆ ತಿಲಕ ನಮ್ಮ ಮಾದರ ಚೆನ್ನಯ್ಯ.

13. ಚೋಳನ ಮನೆಯಲು ಉಣಲೊಲ್ಲದೆ.
ಚೆನ್ನನ ಮನೆಯಲುಂಡೆ

14. ಚೆನ್ನಯ್ಯನ ಮನೆಯಲಂಬಿನುಂಡು ಬದುಕಿದೆ

15. ಗೋತ್ರ ನಾಮ. ಮಾದಾರ ಚೆನ್ನಯ್ಯ.
ಡೋಹರ ಕಕ್ಕಯ್ಯನೆಂಬುದೇನು.

16. ಮಾದಾರ ಚೆನ್ನಯ್ಯನ ಮನೆಯಲುಂಡ ಕಾರಣ

17. ನಡೆ ಚೆನ್ನ, ನುಡಿ ಚೆನ್ನ, ಎಲ್ಲಿ ನೋಡಿದಡಲ್ಲಿ ಚೆನ್ನ.
ಪ್ರಮಥರೊಳಗೆ ಚೆನ್ನ, ಪುರಾತರೊಳಗೆ ಚೆನ್ನ.
ಕೈದೆಗೆದ ನಮ್ಮ ಚೆನ್ನ

18. ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.

19. ಮಾದಾರನೆಂಬೆನೆ ಚೆನ್ನಯ್ಯನ?

20. ಚೆನ್ನಯ್ಯನ ಮನೆಯ ದಾಸನ ಮಗನು

21. ಚೆನ್ನಯ್ಯ ನೆಮ್ಮಯ್ಯನು, ಚೆನ್ನಯ್ಯನ ಮಗನಾನು.

22. ಚೆನ್ನಯ್ಯ ನೆನ್ನ ಮುತ್ತಯ್ಯನಜ್ಜನಪ್ಪನಯ್ಯಾ.

23. ಅಪ್ಪನು ನಮ್ಮ ಮಾದಾರ ಚೆನ್ನಯ್ಯ.

24. ಚೆನ್ನಯ್ಯನ ಮನೆಯಲ್ಲೂ ಬೇಡಿದೆ.

25. ಅಯ್ಯಗಳಯ್ಯ ನಮ್ಮ ಮಾದಾರ ಚೆನ್ನಯ್ಯ.

26. ಎಮ್ಮಯ್ಯ ಚೆನ್ನಯ್ಯ ರಾಯ ಕಂಪಣವ ಹೇರುವ.

27. ಚೆನ್ನ ಚೇರಮನ ಬಂಟ ನಾನಯ್ಯಾ.[7]

ಈ ರೀತಿಯಲ್ಲಿ ಬಸವಣ್ಣನವರು ತಮ್ಮ ವಚನಗಳಲ್ಲಿ ಉಲ್ಲೇಖಿಸಿರುವ ಸಾಲುಗಳನ್ನು ಗಮನಿಸಿದರೆ ಚೆನ್ನಯ್ಯನು ಬಸವಣ್ಣನಿಗಿಂತ ಹಿರಿಯ ಹಾಗೂ ಆದಿ ವಚನಕಾರನಾಗಿ ಮುಂದಿನ ಎಲ್ಲಾ ವಚನಕಾರರಿಗೆ ಇವರ ವಚನಗಳು ಮಾರ್ಗದರ್ಶನ ನೀಡಿರಬಹುದು.

"ಕಲ್ಯಾಣದ ಮಹಾಮಂತ್ರಿ ಬಸವಣ್ಣನವರ ಸಾವಿರ ವಚನಗಳ ಕಟ್ಟನ್ನು ಪಡೆದು ಹೋಗಿ, ತಮ್ಮ ಆಸ್ಥಾನದಲ್ಲಿ ವಚನ ಸಾಹಿತ್ಯದ ಮೊದಲ ಸಮ್ಮೇಳನದಲ್ಲಿ ವಚನ ಸಾಹಿತ್ಯದ ಮೊದಲ ರಚನಕಾರರು ಎಂದು ಮಾದಾರ ಚನ್ನಯ್ಯರವರನ್ನು ಗುರುತಿಸಿ ಪ್ರಕಟಿಸಲ್ಪಡುತ್ತಾರೆ. ಆದುದರಿಂದ ಬಸವಣ್ಣನವರು ತಮ್ಮ ವಚನಗಳಲ್ಲಿ ಅಡಿ-ಗಡಿಗೆ ಇವರನ್ನು ಸ್ಮರಿಸಿರುವುದು. ಸಾವಿರ ವಚನಗಳಲ್ಲಿ ಅಳಿದುಳಿದು ಈಗ ಹತ್ತಾರು ವಚನಗಳು ಮಾತ್ರ ಚಾಲ್ತಿಯಲ್ಲಿ ಸಿಕ್ಕಿರುತ್ತದೆ."[8] ಹಾಗಾಗಿ ಮಾದರ ಚೆನ್ನಯ್ಯನು ಈ ದೃಷ್ಟಿಯಿಂದ ಶ್ರೇಷ್ಠವಚನಕಾರನಾಗಿ 12ನೇ ಶತಮಾನದಲ್ಲಿ ಬದುಕಿದ್ದರು.

ನಿಜವಾಗಲು ಮಾದಾರ ಚೆನ್ನಯ್ಯನ ಮನೆಯಲ್ಲಿ ಶಿವನು ಅಂಬಲಿಯನ್ನು ಸವಿದದಿದ್ದಾನೆಯೇ ಎಂದರೆ ಅದಕ್ಕೆ ಸರಿಯಾದ ಉತ್ತರವನ್ನು ಕೊಡಲು ಸಾಧ್ಯವಿಲ್ಲ. ಒಮ್ಮೆ ಚೋಳ ರಾಜನ ಆಸ್ಥಾನಕ್ಕೆ ಶಿವಭಕ್ತನೊಬ್ಬ ಬಂದಿದ್ದನು. ಅವನನ್ನು ಕಂಡ ಚೆನ್ನಯ್ಯನು ನಮ್ಮ ಮನೆಗೆ ಸಂಜೆ ಪ್ರಸಾದಕ್ಕೆ ಬರಬೇಕೆಂದು ಕರೆದನು. ಅದರಂತೆ ಆ ಶಿವಭಕ್ತನು ಚೆನ್ನಯ್ಯನ ಮನೆಗೆ ಬರುತ್ತಾನೆ. ಆಗ ಚೆನ್ನಯ್ಯ ಶಿವ ಪೂಜೆಯನ್ನು ಮುಗಿಸಿ ಶಿವಭಕ್ತನಿಗೆ ಪ್ರಸಾದ ರೂಪದಲ್ಲಿದ್ದ ಅಂಬಲಿಯನ್ನು ಬಡಿಸಿದನು.

ಅಂಬಲಿಯ ರುಚಿಯನ್ನು ಮನದುಂಬಿ ಹೊಗಳಿದನು. ಆದಕಾರಣ "ಸಾಮಾನ್ಯರ ಮನೆಯ ಗಂಜಿಯನ್ನು ಅಷ್ಟೊಂದು ಹೊಗಳುತ್ತಾ ಊಟ ಮಾಡುವ ಆ ಶಿವಭಕ್ತರನ್ನು ಶಿವ ಎನ್ನದೆ ಏನೆನ್ನುವುದು? ದೊಡ್ಡವರಾಗುವುದು ದೊಡ್ಡನಡತೆಯಿಂದಲೇ ವಿನಹ ದೊಡ್ಡ ಜಾತಿ, ದೊಡ್ಡ ಪದವಿ, ದೊಡ್ಡ ಮನೆ, ದೊಡ್ಡ ಅಧಿಕಾರದಿಂದ ಅಲ್ಲವಲ್ಲ."[9] ಹಾಗಾಗಿ ಮಾದಾರ ಚೆನ್ನಯ್ಯನ ಮನೆಯಲುಂಡ ಶಿವಶರಣನನ್ನ ಜನರು ಶಿವನೆಂದರು. ಶಿವನೇ ಬಂದುದಾಗಿ ಕಲ್ಪಿಸಿರ ಬಹುದು ಎಂದು 'ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ' ಎಂಬ ಕೃತಿಯಲ್ಲಿ ಉಲ್ಲೇಖಿಸಲಾಗಿದೆ.

ಮಾದರ ಚೆನ್ನಯ್ಯನ ಮನೆಯಲ್ಲಿ ಊಟ ಮಾಡಿದ್ದು ಶಿವಭಕ್ತನಾಗಿದ್ದು , ಚೆನ್ನಯ್ಯನ ಕೀಳು ಕುಲದವನು ಕೆಳಜಾತಿಯವನೆಂದು ತಿಳಿದಿದ್ದರೂ. ಆ ಶಿವಭಕ್ತನು ಚೋಳ ರಾಜನ ಮನೆಯಲ್ಲಿ ಮಾಡಿದ್ದ ವಿಧ ವಿಧವಾದ ಭೋಜನಗಳನ್ನು ಬಿಟ್ಟು ಚೆನ್ನಯ್ಯನ ಮನೆ ಅಂಬಲಿಯನ್ನು ಸೇವಿಸಿದ್ದನು. ಇಲ್ಲಿ ಚೆನ್ನಯ್ಯನ ಕಾಯಕ ಮತ್ತು ಅವನ ನಿಷ್ಠೆಯನ್ನು ಮೆಚ್ಚಿ ಚನ್ನಯ್ಯನ ಮನೆಗೆ ಬಂದಿರಬಹುದು ಹಾಗಾಗಿ ಶಿವಭಕ್ತನೆ ಶಿವ ಸ್ವರೂಪಿ ಎಂದು ನಂಬಲಾಗಿದೆ.

## ಅಡಿ ಟಿಪ್ಪಣಿಗಳು:

1. ಶಿವಾನಂದ ಕೆಳಗಿನಮನಿ. (2006). ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು. ಪು.ಸಂ. 226
2. ಚಂದ್ರಶೇಖರ ವಸ್ತ್ರದ. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ. ಪು.ಸಂ. 1
3. ಶಿವಾನಂದ ಕೆಳಗಿನಮನಿ. (2006). ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು. ಪು.ಸಂ. 230
4. ಶಿವಾನಂದ ಕೆಳಗಿನಮನಿ. (2006). ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು. ಪು.ಸಂ. 230
5. ಶಿವಾನಂದ ಕೆಳಗಿನಮನಿ. (2006). ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು. ಪು.ಸಂ. 132
6. ಚಂದ್ರಶೇಖರ ವಸ್ತ್ರದ. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ. ಪು.ಸಂ. 61
7. ಚಂದ್ರಶೇಖರ ವಸ್ತ್ರದ. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ. ಪು.ಸಂ. 66, 67, 68, 69, 70, 71, 72
8. ನಾರಾಯಣ ಮ.ಸಿ. ಮಳವಳ್ಳಿ. ಆದಿಜಾಂಬವ ವಂಶ (ಕುಲ). ಪು.ಸಂ. 58
9. ಚಂದ್ರಶೇಖರ ವಸ್ತ್ರದ. ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ. ಪು.ಸಂ. 19

## ಪರಾಮರ್ಶನ ಗ್ರಂಥಗಳು:


1. ಶಿವಾನಂದ ಕೆಳಗಿನಮನಿ. (2006). ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ. ಸಿ.ವಿ.ಜಿ. ಪಬ್ಲಿಕೇಷನ್. ಬೆಂಗಳೂರು.
2. ಮೈಲಹಳ್ಳಿ ರೇವಣ್ಣ. (2012). ದಲಿತ ಸಂತರು. ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ. ಮೈಸೂರು.
3. ಶ್ರೀನಿವಾಸಮೂರ್ತಿ ಎಂ. ಆರ್. (2013). ವಚನ ಧರ್ಮಸಾರ. ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.
4. ಕುಪೇಂದ್ರ ಪಾಟೀಲ. (2016). ಅಪ್ಪನು ನಮ್ಮ ಮಾದಾರ ಚೆನ್ನಯ್ಯ. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು. ಮೈಸೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.